ನಿದ್ದೆ ಹತ್ತದಿರುವ ಮನುಷ್ಯರು ಎಂಥ ದಾರುಣ ಸ್ಥಿತಿಗೆ ತಲುಪಬಹುದು ಎಂಬುದರ ಸಾಧ್ಯತೆಗಳನ್ನು ಕಾಣಲಿಕ್ಕೆ ನಾವು ಶೇಕ್ಸ್ಪಿಯರ್ ಮಹಾಕವಿಯ ಹಲವು ದೃಶ್ಯಗಳನ್ನು ನೋಡಬೇಕು. ರಾಜ ಡಂಕನ್‌ನನ್ನು ಕೊಲೆ ಮಾಡಲೋ ಬೇಡವೋ ಎಂದು ತೊಳಲಾಡುತ್ತ, ಅವನ ನಿದ್ರಾಭವನದ ಎದುರಿಗೆ – 'ಮಾಡಬೇಕಾದ್ದನ್ನು ಮಾಡಬೇಕಿರುವಾಗ ಮಾಡುವುದನ್ನು ಬೇಗ ಮಾಡುವುದು ಒಳಿತು...' – ಎನ್ನುತ್ತ ಏನೂ ಮಾಡಲಾಗದೆ ಒಳಾಯಿಸುವ ಮ್ಯಾಕ್‌ಬೆಥ್; ಅಂಥ ಸನ್ನಿವೇಶದಲ್ಲಿ ಅವನ ಗಂಡಸುತನವನ್ನು ಹಂಗಿಸಿ 'ನಿನ್ನ ಬಯಕೆಯೊಳಗೆ ಹುಟ್ಟಿರುವ ಕೃತ್ಯಕ್ಕೆ ಸಮಾನವಾದ ಧೈರ್ಯವನ್ನು ನಿಜದಲ್ಲೂ ತೋರಿಸಬಲ್ಲೆಯಾ?' ಎಂದು ಪ್ರಚೋದಿಸುವ ಲೇಡಿ ಮ್ಯಾಕ್‌ಬೆಥ್; ಮತ್ತು ನಾಟಕದ ಕಡೆಯ ಅಂಕದಲ್ಲಿ ತನ್ನ ಕೈಗಳಿಗೆ ಅಂಟಿರುವ ಭ್ರಾಮಕ ರಕ್ತದ ಕಲೆಯನ್ನು ತೊಳೆದುಕೊಳ್ಳಲು ವ್ಯರ್ಥಪ್ರಯತ್ನ ಮಾಡುತ್ತ – 'ಅರೇಬಿಯಾದ ಎಲ್ಲ ಸುಗಂಧದ್ರವ್ಯಗಳೂ ಈ ನನ್ನ ಪುಟ್ಟ ಕೈಗಳನ್ನು ಮಧುರಗೊಳಿಸಲಾರವು' ಎಂದು ನಿದ್ದೆಯಲ್ಲೇ ಹಲುಬುತ್ತ ಓಡಾಡುವ ಅದೇ ರಾಣಿ – ಇಂಥ ಹಲವು ದೃಶ್ಯಗಳನ್ನು ಶೇಕ್ಸ್ಪಿಯರ್ ನಿದ್ದೆ ಬಾರದ ರಾತ್ರಿಗಳಲ್ಲೇ ಕೂರಿಸಿದ್ದಾನೆ.

ನಿದ್ದೆ ಬಾರದೆ ಮಾತಾಡುವ ಇಂಥ ಎಲ್ಲ ಶೇಕ್ಸ್ಪಿಯರ್ ಪಾತ್ರಗಳ ನಡುವೆ ಒಂದು ಮಹತ್ವದ ಸಾಮ್ಯವಿದೆ – ಅವರೆಲ್ಲರೂ ಆಸ್ತಿಪಾಸ್ತಿಗಳನ್ನು ಹೊಂದಿ ಶ್ರೀಮಂತ ಗಣ್ಯವರ್ಗಕ್ಕೆ ಸೇರಿದವರು; ಸುಪ್ಪತ್ತಿಗೆಗಳಲ್ಲೇ ಪವಡಿಸುವ ಅವರಿಗೆ ಸುಖವಾಗಿ ನಿದ್ದೆ ಮಾಡುವುದಕ್ಕೆ ಸಾಧ್ಯವಾಗಬೇಕಿದ್ದರೂ ಅವರು ನಿದ್ರಾವಂಚಿತರು. ಅದಕ್ಕೆ ವಿರುದ್ಧವಾಗಿ, ಸೇವಕರು ಮತ್ತು ಬಡವರೇ ಸುಖವಾಗಿ ಮಲಗಿ ನಿದ್ರಿಸುವುದನ್ನೂ ಶೇಕ್ಸ್ಪಿಯರ್ ನಾಟಕಗಳು ನಮಗೆ ಕಾಣಿಸುತ್ತವೆ. ಡಂಕನ್‌ನ ಆಪ್ತಸೇವಕರು ಹಗಲಿಡೀ ದಣಿದು, ಆ ದಣಿವಾರಿಸಿಕೊಳ್ಳಲಿಕ್ಕೆ ಅಮಲೇರಿಸಿಕೊಂಡು ನಿದ್ರಿಸಿದ್ದರಿಂದಲೇ, ಮ್ಯಾಕ್‌ಬೆಥ್‌ಗೆ ಅವನನ್ನು ಕೊಲ್ಲಲು ಸಾಧ್ಯವಾಗಿದ್ದು.

★★★

ಈ ಸರಳ ಸಂಗತಿಯನ್ನು ಅರಿಯಲಿಕ್ಕೆ ನಾವು ಶೇಕ್ಸ್ಪಿಯರನ ನಾಟಕಗಳಿಗೇನೂ ಹೋಗಬೇಕಾಗಿಲ್ಲ. ಇನ್ನೋವಾ ಕಾರಿನ ಹವಾನಿಯಂತ್ರಣದಲ್ಲಿ ಕುಳಿತು ಹೆದ್ದಾರಿಯಲ್ಲಿ ಸಾಗುತ್ತ ಕಣ್ಣು ಹತ್ತದೆ ಒದ್ದಾಡುತ್ತಿರುವಾಗ, ಎದುರಿಗಿನ ಲಾರಿಯೊಂದರ ಭಾರೀ ಸರಂಜಾಮುಗಳ ತುತ್ತತುದಿಯ ರಣರಣಬಿಸಿಲಿನಲ್ಲೂ ಹಾಯಾಗಿ ಮಲಗಿ ನಿದ್ರಿಸುವ ಮನುಷ್ಯರನ್ನು ಕಂಡಾಗ, ಹೊಟ್ಟೆಕಿಚ್ಚಾಗುವ ಅನುಭವವು ಅದರ ಒಂದಿಲ್ಲೊಂದು ವೈವಿಧ್ಯದಲ್ಲಿ ನಮಗೆಲ್ಲರಿಗೂ ಆಗಿರುತ್ತದೆ. ಅಂಥದೇ ಇನ್ನೊಂದು ವಿರುದ್ಧ ದೃಷ್ಟಾಂತ ನೆನಪಿಗೆ ಬರುತ್ತದೆ – ತಮ್ಮ ಜೀವನದ ಬಹುಪಾಲು ರಾತ್ರಿಗಳನ್ನು ಬಯಲಾಟದ ಮೇಳಗಳಲ್ಲೇ ಕಳೆದ ಯಕ್ಷಗಾನ ಕಲಾವಿದರೊಬ್ಬರಿಗೆ ರಾಷ್ಟ್ರಪ್ರಶಸ್ತಿ ಬಂತು. ಸರಿ, ದೆಹಲಿಯ ಸಮಾರಂಭಕ್ಕೆ ಹೋದ ಅವರನ್ನು ಮೆತ್ತಗಿನ ಸುಪ್ಪತ್ತಿಗೆಯ ಹವಾನಿಯಂತ್ರಿತ ಪಂಚತಾರಾ ಕೋಣೆಯಲ್ಲಿ ಮಲಗಿಸಲಾಯಿತು. ಮಾರನೆಯ ದಿನ ಅವರು ಆ ರಾತ್ರಿಯ ಕಷ್ಟವನ್ನು ನನ್ನೊಂದಿಗೆ ತೋಡಿಕೊಂಡರು – 'ನನಗೆ ನಿನ್ನೆ ರಾತ್ರಿ ಒಂದು ಚಣವೂ ನಿದ್ದೆ ಹತ್ತಲಿಲ್ಲ ಮಹರಾಯ. ಅದೆಂಥ ಕೆಟ್ಟ ಹಾಸಿಗೆ, ಮಲಗಿದರೆ ಹುಗಿದು ಹೋಗುವಂಥ ಅದರಲ್ಲಿ ಮೈಕೈಯೆಲ್ಲ ಸೆಳೆಯತೊಡಗಿತು. ಜತೆಗೆ ತಡೆಯಲಾಗದ ಚಳಿ ಬೇರೆ. ರಾತ್ರಿಯಿಡೀ ನಾನು ಎದ್ದು ಕುಳಿತು ಆ ಚಳಿಯಂತ್ರವನ್ನು ಆರಿಸುವುದೆಲ್ಲೆಂದು ಹುಡುಕಿದೆ; ಗೊತ್ತಾಗದಿದ್ದಾಗ ಇರುವ ಎಲ್ಲ ದಿಂಬುಗಳನ್ನೂ ಒಂದಾದಮೇಲೊಂದರಂತೆ ಚಳಿಯುಗುಳುವ ಅದರ ಮುಖಕ್ಕೆ ಅಡ್ಡವಾಗಿರಿಸಿದೆ; ಕಡೆಗೆ ನನ್ನ ಶಾಲು ತೆಗೆದು ಅದನ್ನು ಕಿವಿಗೆ ಕಟ್ಟಿಕೊಂಡು ಮಲಗಿದೆ – ಈ ಗಡಿಬಿಡಿಯಲ್ಲಿ ನಿದ್ದೆ